ವುದಕ್ಕೆ ಫೌಂಡೇಶನ್ ಹಾಕಿಕೊಳ್ಳಲು ಶೆ ಮಂಟಿ ಸಿಮೆಂಟ್ ಬೇಕೆಂದು ಕೇಳಿದರೆ ಅದನ್ನು ಕೊಡತಕ್ಕಂತಹ ಕೆಲಸ ನಡೆದಿದೆ. ನಾವು ಕೂಡ ಮೊನ್ನೆ ಅನೇಕ ತಾಲ್ಲೂಕು ಕಛೇರಿಗಳಲ್ಲಿ ತನಿಖೆ ನಡೆಸಿದಾಗ ರೈತರ ಸಿಮೆಂಟ್ ಬೇಡಿಕೆಯನ್ನು ಸಾಕಷ್ಟು ಮಟ್ಟಿಗೆ ಪೂರೈಕೆ ಮಾಡಿದ್ದಾರೆ. ಇನ್ನು ಹೆಚ್ಚು ಪರಿಣಾಮಕಾರಿಯಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಸಿಮೆಂಟನ್ನು ಹಂಚುವ ಸೂಚನೆ ಇದ್ದರೆ ನಾವು ಅದನ್ನು ಪರಿಶೀಲನೆ ಮಾಡುತ್ತೇವೆ.

Gajanur Lift Irrigation Scheme

94, SRI SHEERANALY CHANDRASEKHAR (Hosanagar).—Will the Minister for Transport and Minor Irrigation be pleased to state.—

(a) whether the Government had passed an order to take up the Gajanur Lift Irrigation work at a cost of one Crore of Rupees ;

(b) if so the resons why the work has not been started as yet ;

(c) wheu would they start the work ?

SRI M.M.J. SADYOJATHA (Minister for Transpo rt and Minor Irrigation).—

(a) No.

(b) and (c) Does not arise in view of reply to clause 1 above.

ಶ್ರೀ ಎಸ್.ಎಂ. ಶೀರ್ನಾಳಿ ಚಂದ್ರಶೇಖರ್.—ಸ್ವಾಮಿ ನಾನು ಸರ್ಕಾರದ ಪ್ರಮುಖ ಜಾಡಮಾಲಿಗಳಲ್ಲಿ ಒಬ್ಬ.

ಶ್ರೀ ಐ.ಪಿ.ಡಿ. ಸಾಲಪ್ಪ,—ಮಾನ್ಯ ಸದಸ್ಯರು ಜಾಡಮಾಲಿ ಎನ್ನುವ ಪದವನ್ನು ಉಪಯೋಗಿಸಬಾರದು, ಅದಕ್ಕೆ ಬದಲಾಗಿ ಪೌರ ಕಾರ್ಮಿಕರು ಎನ್ನುವ ಪದವನ್ನು ಉಪಯೋಗ ಮಾಡಬೇಕು.

MR. SPEAKER.—Do not use that word.

ಶ್ರೀ ಎಸ್.ಎಂ. ಶೀರ್ನಾಳಿ ಚಂದ್ರಶೇಖರ್.—ಹಾಗಾದರೆ ಪೌರ ಕಾರ್ಮಿಕರಲ್ಲಿ ನಾನು ಒಬ್ಬ. ಗಾಜನೂರು ಎತ್ತು ನೀರಾವರಿ ಯೋಜನೆಯನ್ನು ಪ್ರಾರಂಭ ಮಾಡುವುದಕ್ಕೆ ಆಜ್ಞೆ ಮಾಡುತ್ತೇನೆ ಎಂದು ಕಳೆದ ಶಾಸನ ಸಭೆಯಲ್ಲಿ ಮಾನ್ಯ ಮಂತ್ರಿಗಳು ಆಶ್ವಾಸನೆಯನ್ನು ಕೊಟ್ಟಿದ್ದರು, ಹಾಗಾದರೆ ಈ ಯೋಜನೆ ಬಡ್ಜೆಟ್‌ನಲ್ಲಿ ಸೇರಿದೆಯೇ ಈ ಯೋಜನೆಯನ್ನು ಕಾರ್ಯಗತ ಮಾಡಿಕೊಡುತ್ತೀರಾ ?

† ಶ್ರೀ ಎಂ.ಎಂ.ಜೆ. ಸದ್ಯೋಜಾತ.—ಈ ವರ್ಷವೇ ಆ ಕೆಲಸ ಪ್ರಾರಂಭ ಮಾಡುವ ಆಶ್ವಾಸನೆಯನ್ನು ಕೊಡುತ್ತೇನೆ.

ಶ್ರೀ ಎಸ್.ಎಂ. ಶೀರ್ನಾಳಿ ಚಂದ್ರಶೇಖರ್.—ಮಾನ್ಯ ಮಂತ್ರಿಗಳಿಗೆ ಈ ಸದನದ ಮೂಲಕ ಧನ್ಯವಾದಗಳನ್ನು ಅರ್ಪಿಸುತ್ತೇನೆ.

Qualification to hold the Post of M.O.H. in Bangalore Corporation.

179. SRI I.P.D. SALAPPA (Binnypet).—Will the Minister for Housing and Urban Development be pleased to state.—

(a) the required qualification to hold the post of Medical Officer of Health (MOH) in Bangalore City Corporation ;

(b) whether there is any unqualified hand holding the post of Medical Officer of Health in the Corporation;

(c) the reasons to continue the services of the deputed candidates;

(d) the resons for keeping an official for more than 5 years on deputation basis, in the Corporation?

SRI DHARAM SINGH NARAYANA SINGH (Minister for Housing and Urban Development).—

(a) A Medical Degree of a recognised University and Diplome in Public Health.

(b) Yes.

(c) Three seniormost deputed Doctors are posted as medical Officers of Health to fill up the 50% quota on deputation as per the existing Cadre and Recruitment Rules.

(d) Only one Doctor who is on depution is continued more than 5 years in the interest of civic services.

ಶ್ರೀ ಐ.ಪಿ.ಡಿ. ಸಾಲಪ್ಪ.—ಸ್ವಾಮಿ, ನನ್ನ ಪ್ರಶ್ನೆಗೆ ಉತ್ತರವಾಗಿ ಮಾನ್ಯ ಮಂತ್ರಿಗಳು ನಿಜ ಎಂದು ಹೇಳಿದ್ದಾರೆ, ಅದಕ್ಕಾಗಿ ಅವರಿಗೆ ಪಂದನೆಗಳನ್ನರ್ಪಿಸುತ್ತೇನೆ. ಏಕೆಂದರೆ, ವೈದ್ಯಾಕಾರಿಯು ವಿದ್ಯಾರ್ಹತೆಗಳು ಯಾವುವು ಎಂದು ಕೇಳಿದ್ದಕ್ಕೆ ಇಲ್ಲಿ ಮೆಡಿಕಲ್ ಡಿಗ್ರಿ ಮತ್ತು ಡಿಪಿಎಚ್ ಆಗಿರಬೇಕೆಂದು ತೇಳಿದ್ದಾರೆ. ಈ ರೀತಿ ನಿಯಮವಿದ್ದರೂ ಸಹ ಎಲ್ಎಂಪಿ ಆಗಿರುವಂತಹ ಒಬ್ಬ ಅಧಿಕಾರಿಯನ್ನು ಮೆಡಿಕಲ್ ಆಫೀಸರ್ ಆಗಿ ಮುಂದುವರೆಸಲು ಕಾರಣವೇನು? ಅಲ್ಲಿ ಅನೇಕ ಹರಿಜನರು ಮೆಡಿಕಲ್ ಡಿಗ್ರಿ ಮತ್ತು ಡಿಪಿಎಚ್ ಮಾಡಿಕೊಂಡಿದ್ದರೂ ಸಹ ಅವರಿಗೆ ಈ ಎದ್ದೆಯನ್ನು ಕೊಡದೆ ಅಸಿಸ್ಟೆಂಟ್ ಸರ್ಜನ್‌ಗಳಾಗಿ ಮುಂದುವರೆಸುತ್ತಿರುವುದಕ್ಕೆ ಕಾರಣವೇನು ?

† ಶ್ರೀ ಧರ್ಮಸಿಂಗ್.—ಮಾನ್ಯ ಅಧ್ಯಕ್ಷರೇ, ಇಲ್ಲಿ ಕೊಟ್ಟಿರುವ ಉತ್ತರವನ್ನು ಮಾನ್ಯ ಸದಸ್ಯರು ಒಪ್ಪಿದ್ದಾರೆ. ಅಲ್ಲಿ ಈಗ ೪೬ ಜನ ಡಾಕ್ಟರ್ಸ್ ಇದ್ದಾರೆ, ಇವರ ಜೊತೆಗೆ ಡೆಪ್ಯೂಟೇಷನ್ ಮೇಲೆ ಅಲ್ಲಿಗೆ ಹೋಗಿರುವಂತಹ ೧೩ ಜನ ಡಾಕ್ಟರ್ಸ್ ಇದ್ದಾರೆ. ನಾನು ಮಂತ್ರಿಯಾದ ಮೇಲೆ ಅಲ್ಲಿರುವ ಡಾಕ್ಟರ್ಸ್‌ಗಳಿಗೆ ಎಲ್ಲ ರೀತಿಯ ವಿದ್ಯಾರ್ಹತೆಗಳು ಇವೆಯೇ ಎಂದು ಪರಿಶೀಲನೆ ಮಾಡಿಸಿ ನೋಡಿದ್ದೇವೆ. ಅಲ್ಲಿ ಮೊದಲಿನಿಂದಲೂ ೪೬ ಜನರು ಕೆಲಸ ಮಾಡಿಕೊಂಡು ಬಂದಿದ್ದಾರೆ. ಜೊತೆಗೆ ಡೆಪ್ಯೂಟೇಷನ್ ಮೇಲೆ ಅಲ್ಲಿಗೆ ೧೩ ಜನರು ಹೋಗಿದ್ದಾರೆ. ನಮ್ಮ ಸಿ. ಅಂಡ್ ಆರ್. ರೂಲ್ಸ್ ಪ್ರಕಾರ ೫೦ ಪರ್ಸೆಂಟ್‌ವರೆಗೆ ಡೆಪ್ಯೂಟೇಷನ್ ಮೇಲೆ ಕಳುಹಿಸಬೇಕೆಂದು ಇದೆ. ಈ ನಿಯಮದ ಪ್ರಕಾರ ಕಳುಹಿಸುವಾಗ ಎಲ್ಲ ವಿದ್ಯಾರ್ಹತೆಗಳು ಇರುವವರನ್ನೇ ಅಲ್ಲಿಗೆ ಕಳುಹಿಸಿಕೊಡಬೇಕೆಂದು ಹೇಳಿದ್ದೇವೆ. ಮತ್ತು ಸರ್ಕಾರಕ್ಕೂ ಕೂಡ ಬರೆದಿದ್ದೇವೆ. ಹರಿಜನರ ಪೈಕಿ ಎಲ್ಲ ರೀತಿಯ ವಿದ್ಯಾರ್ಹತೆ ಇರುವವರು ಇದ್ದರೂ ಸಹ ಎಲ್ಎಂಪಿ ಆದವರನ್ನು ಮೆಡಿಕಲ್ ಆಫೀಸರ್ಸ್ ಆಗಿ ಮುಂದುವರೆಯುತ್ತಿರುವುದಕ್ಕೆ ಕಾರಣವೇನೆಂದು ಮಾನ್ಯ ಸದಸ್ಯರು ಕೇಳಿದ್ದಾರೆ. ಆದರೆ ಇವರು ಕಳೆದ ೫ ವರ್ಷಗಳಿಂದಲೂ ಅಲ್ಲಿ ಕೆಲಸ ಮಾಡುತ್ತಿರುವುದರಿಂದ ಅವರು ಅಲ್ಲಿಯೇ ಮುಂದುವರೆಯಬೇಕೆಂದು ಕಾರ್ಪೋರೇಷನ್‌ನಲ್ಲಿ ಒಂದುನಿರ್ಣಯವಾಗಿದೆ. ಇದು ಸರ್ಕಾರದ ಕನ್ಸಿಡರೇಷನ್‌ನಲ್ಲಿ ಇದೆ. ಈ ವಿಚಾರದಲ್ಲಿ ಸರ್ಕಾರ ಹಿಂದೆ ಹೋಗುತ್ತಿಲ್ಲ.

ಶ್ರೀ ಐ.ಪಿ.ಡಿ. ಸಾಲಪ್ಪ.—ಮಾನ್ಯ ಮಂತ್ರಿಗಳು ಹರಿಜನರಿಗೆ ಅನ್ಯಾಯವಾಗಿದೆ ಎಂಬುದನ್ನು ಒಪ್ಪುತ್ತಾರೆ. ಈ ಹರಿಜನರಿಗೆ ಎಲ್ಲ ರೀತಿಯ ವಿದ್ಯಾರ್ಹತೆಗಳಿದ್ದರೂ ಸಹ ಅವರನ್ನು ಮೆಡಿಕಲ್ ಆಫೀಸರ್ ಆಗಿ ಏತಕ್ಕೆ ನೇಮಕ ಮಾಡಲಿಲ್ಲ ಎಂಬ ವಿಚಾರ ಬಹುಶಃ ಮಾನ್ಯ ಮಂತ್ರಿಗಳಿಗೂ ಸಹ ಗೊತ್ತಿದೆ. ನಮ್ಮ ದೃಷ್ಟಿಯಿಂದ ಹೇಳಬೇಕೆಂದರೆ, ಇವರಿಗೆ ಆಗಿರುವಂತಹ ಅನ್ಯಾಯದ ಬಗ್ಗೆ ನಮಗೆ

ಬಹಳ ನೋವಾಗಿದೆ. ವಿದ್ಯಾರ್ಹತೆಗಳಿದ್ದರೂ ಸಹ ಇವರಿಗೆ ರಾಜ್ಯಾಂಗದತ್ತವಾಗಿ ಕೊಡಬೇಕಾದ ಸ್ಥಾನಮಾನಗಳನ್ನು ಕೊಡದೆ ಮತ್ತು ಇವರುಗಳು ಮೇಲಕ್ಕೆ ಬರದಂತೆ ತಂಳಿದಿದ್ದಾರೆ. ಈ ಜನರಿಗೆ ಆಗಿರುವ ಅನ್ಯಾಯವನ್ನು ಸರಿಪಡಿಸುವುದಕ್ಕೆ ಸರ್ಕಾರ ಏನಾದರೂ ಯೋಚನೆ ಮಾಡಿದೆಯೇ ಎಂಬ ಬಗ್ಗೆ ಮಾನ್ಯ ಮಂತ್ರಿಗಳು ತಿಳಿಸಬೇಕು ?

ಶ್ರೀ ಧರ್ಮಸಿಂಗ್.—ಅಧ್ಯಕ್ಷರೇ, ಈಗ ಕಾರ್ಪೊರೇಷನ್‌ನಲ್ಲಿ ಏನು ಡಾಕ್ಟರ್ಸ್ ಕೆಲಸ ಮಾಡುತ್ತಿದ್ದಾರೆ ; ಅವರ ಪೈಕಿ ಹರಿಜನ ಮತ್ತು ಗಿರಿಜನರಿಗೆ ೧೮ ಪರ್ಸೆಂಟ್‌ವರೆಗೆ ಪ್ರಾತಿನಿಧ್ಯ ನೀಡಲಾಗಿದೆಯೇ ಹೇಗೆ ಎಂದು ಮಾನ್ಯ ಸದಸ್ಯರು ಕೇಳುತ್ತಿದ್ದಾರೆ. ಈ ಮೊದಲು ಅಲ್ಲಿ ಸಾಕಷ್ಟು ಮಂದಿ ಸ್ಥಳೀಯ ಅಭ್ಯರ್ಥಿಗಳು ಕೆಲಸ ಮಾಡುತ್ತಿದ್ದರು. ಇವರುಗಳ ಪೈಕಿ ೩ ಜನರು ಮಾತ್ರ ಹರಿಜನರಿದ್ದರು. ಪಿಎಸ್‌ಸಿಯವರು ಅಭ್ಯರ್ಥಿಗಳನ್ನು ಸೆಲೆಕ್ಟ್ ಮಾಡಿದ್ದರೂ ಸಹ, ಇದನ್ನು ಕಳೆದ ೨ ವರ್ಷಗಳಿಂದ ಜಾರಿಗೆ ಕೊಟ್ಟಿರಲಿಲ್ಲ. ನಾನು ಅಧಿಕಾರಕ್ಕೆ ಬಂದಮೇಲೆ ಅದನ್ನು ಇಂಪ್ಲಿಮೆಂಟ್ ಮಾಡಿದ್ದೇನೆ. ಇದರ ಪ್ರಕಾರ ಅಲ್ಲಿ ಈಗ ಹರಿಜನರ ಪೈಕಿ ೧೩ ಜನರು ಕೆಲಸ ಮಾಡುತ್ತಿದ್ದಾರೆ. ಇದರಿಂದ ಅಲ್ಲಿ ೨೫ ಪರ್ಸೆಂಟ್‌ವರೆಗೆ ಪ್ರಾತಿನಿಧ್ಯ ಕೊಟ್ಟಂತೆ ಆಯಿತು. ಒಟ್ಟಿನಲ್ಲಿ ನಮ್ಮ ಹೊಸ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ನಾವು ಹರಿಜನ ಮತ್ತು ಗಿರಿಜನರಿಗೆ ಹೆಚ್ಚಿನ ಆದ್ಯತೆ ಕೊಡುತ್ತಿದ್ದೇವೆ.

Schoolarships to S. C. Students of Government Tamil Primay School at K. G. F.

102 SRI C. M. ARUMUGHAM (K. G. F.).—Will the Minister for Social Welfare and Backward classes be pleased to state.—

(a) whether it is a fact that 168 Scheduled Caste students Scholarships of the Government Tamil Higher Primary School Balaghat K. G. F. were renewed during the first week of September 1979.

(b) date on which the cheque was encashed and amount disbursed to the students.

(c) whether it is a fact that the Assistant Educational Officer visited the School on the complaint of non-disbursal of the Scholarship amount and he has taken away the files connected thereto ?

SRI P. VENKATARAMANA (Minister for Social Welfare and Backward Classes). —

(a) Yes.

(b) A cheque for Rs. 8400 was encashed on 26-9-79 No amount was disbursed to the students.

(c) Yes, The Assistant Educational Officer visited the School on 23-1-80 and the disbursement register was not made available to to the Assistant Educational Officer,

SRI C. M. ARUMUGHAM.—Sir, May I know when this matter was brought to the notice of the Government ?

† SRI P. VENKATARAMANA.—The District Social Welfare Officer, Kolar, who is the sanctioning authority of the seheme, has intimated